## ಸೂಕ್ತಿಪ್ರಭ

ಹೇಗೆ ನೆರಳು ಮತ್ತು ಬೆಳಕುಗಳು ಒಂದನ್ನೊಂದು ಬಿಟ್ಟಿರುವುದಿಲ್ಲವೊ ಹಾಗೆಯೇ ವ್ಯಕ್ತಿ ಮತ್ತು ಕರ್ಮ ಪರಸ್ಪರ ಸಂಬಂಧವುಳ್ಳವು.

ಗುಣವುಳ್ಳ ಒಬ್ಬ ಮಗ ಸಾಕು, ಮೂರ್ಖರಾದ ನೂರು ಮಕ್ಕಳೇಕೆ? ಸಾವಿರಾರು ತಾರೆಗಳು ಒಬ್ಬ ಚಂದ್ರನಿಗೆ ಸಮವಲ್ಲ.

ಇತರರಿಗೆ ಉಪದೇಶ ಕೊಡುವಾಗ ಎಲ್ಲ ಪಂಡಿತರೇ ಆಗುತ್ತಾರೆ. ಆದರೆ ಅದನ್ನೇ ತಾನು ಆಚರಿಸುವಾಗ ಮುನಿಗಳೂ ಸಹ ಪಂಡಿತರಲ್ಲ.

ಸಂಭಾಷಣೆ ಒಂದು ಕಲೆ. ನಾನು ಹೇಳುವುದನ್ನು ಇತರರು ಕೇಳಬೇಕೆಂಬ ಭಾವನೆ ಹೇಗಿರುತ್ತದೊ ಹಾಗೆಯೇ ಇತರರು ಹೇಳುವಾಗಲೂ ಮೌನವಾಗಿದ್ದು ಕೇಳಬೇಕು. —*ಸುಭಾಷಿತ.*

ಕಾರ್ಯನಿರತರಾದವರಿಗೆ ಅಳಲು ಹೊತ್ತು ಇರುವುದಿಲ್ಲ. —*ಬೈರನ್.*

ಕಣ್ಣೀರು ಮತ್ತು ಮುಗುಳ್ನಗೆ ಜೀವನದ ಸಂಗೀತವನ್ನು ಸೃಷ್ಟಿಸುತ್ತವೆ. —*ಡಾ. ಎಸ್. ರಾಧಾಕೃಷ್ಣನ್*

ಈ ಜಗತ್ತಿನ ಅತ್ಯುತ್ತಮ ಮತ್ತು ಅತಿ ಸುಂದರ ವಸ್ತುಗಳನ್ನು ನೋಡಲಾಗುವುದಿಲ್ಲ, ಸ್ಪರ್ಶಿಸಲೂ ಆಗುವುದಿಲ್ಲ. ಅವುಗಳನ್ನು ಹೃದಯದಿಂದ ಅನುಭವಿಸಬೇಕು. —*ಹೆಲನ್ ಕೆಲರ್.*

ಕೋಪ ನಮ್ಮನ್ನು ಕಷ್ಟದಲ್ಲಿ ಸಿಲುಕಿಸುತ್ತದೆ, ಹೆಮ್ಮೆ ನಮ್ಮನ್ನು ಅಲ್ಲಿಯೆ ಇರಿಸುತ್ತದೆ.

—*ಅನಾಮಿಕ.*

ವಿಜ್ಞಾನವು ನಮ್ಮ ಕನಿಷ್ಠ ಆವಶ್ಯಕತೆಗಳಿಗೆ ಗರಿಷ್ಠ ಕೊಡುಗೆಯನ್ನು ನೀಡುತ್ತದೆ.
—ಜಸ್ಟೀಸ್ ಹೋಮ್ಸ್ (Justice Holmes)

ಎಲ್ಲವೂ ನಿಮ್ಮ ವಿರುದ್ಧವಾಗಿ ನಡೆಯುತ್ತಿರುವಾಗ, ವಿಮಾನವು ಹಾರುವುದು ಗಾಳಿಗೆ ವಿರುದ್ಧವಾಗಿ, ಅದರೊಂದಿಗಲ್ಲ, ಎಂಬುದನ್ನು ನೆನಪಿಸಿಕೊಳ್ಳಿ. —*ಹೆನ್ರಿ ಫೋರ್ಡ್*

# ಪ್ರಾರ್ಥನೆ

## ಶ್ರೀರಾಮಸ್ತೋತ್ರಮ್

(ಅಧ್ಯಾತ್ಮರಾಮಾಯಣದಿಂದ)

ವಿಶ್ವೋದ್ಭವಸ್ಥಿತಿಲಯಾದಿಷು ಹೇತುಮೇಕಂ
ಮಾಯಾಶ್ರಯಂ ವಿಗತಮಾಯಮಚಿಂತ್ಯಮೂರ್ತಿಮ್ ।
ಆನಂದಸಾಂದ್ರಮಮಲಂ ನಿಜಬೋಧರೂಪಂ
ಸೀತಾಪತಿಂ ವಿದಿತತತ್ತ್ವಮಹಂ ನಮಾಮಿ ॥ ೧ ॥

ವಿಶ್ವದ ಉದ್ಭವ-ಸ್ಥಿತಿ-ಲಯಗಳಿಗೆ ಅದ್ವಿತೀಯ ಕಾರಣನೂ ಮಾಯೆಗೆ ಆಶ್ರಯನಾದವನೂ ಮಾಯಾರಹಿತನೂ ಅಚಿಂತ್ಯಮೂರ್ತಿಯೂ ಆನಂದಸಾಂದ್ರನೂ ವಿಮಲಸ್ವರೂಪನೂ ನಿಜಬೋಧಸ್ವರೂಪನೂ ತತ್ತ್ವವನ್ನು ಅರಿತವನೂ ಆದ ಸೀತಾಪತಿಯನ್ನು ನಮಿಸುತ್ತೇನೆ.

ಪರಧನ-ಪರದಾರ-ವರ್ಜಿತಾನಾಂ
ಪರಗುಣಭೂತಿಸುತುಷ್ಟಮಾನಸಾನಾಮ್ ।
ಪರಹಿತನಿರತಾತ್ಮನಾಂ ಸುಸೇವ್ಯಂ
ರಘುವರಮಂಬುಜಲೋಚನಂ ಪ್ರಪದ್ಯೇ ॥ ೨ ॥

ಪರಧನವನ್ನು ಮತ್ತು ಪರಸ್ತ್ರೀಯರನ್ನು ತ್ಯಜಿಸಿದವರಿಗೆ, ಅನ್ಯರ ಸಂಪತ್ತನ್ನು ಮತ್ತು ಸುಗುಣಗಳನ್ನು ನೋಡಿ ಸಂತುಷ್ಟರಾದವರಿಗೆ ಯಾವಾಗಲೂ ಪರಹಿತದಲ್ಲಿ ನಿರತರಾಗಿರುವವರಿಗೆ ಸುಲಭಸೇವ್ಯನೂ, ಅಂಬುಜಾಕ್ಷನೂ ಆದ ರಘುವರನಲ್ಲಿ ಶರಣಾಗತನಾಗುತ್ತೇನೆ.

ಅಹಂಪ್ರಪನ್ನೋಽಸ್ಮಿ ಪದಾಂಬುಜಂ ಪ್ರಭೋ
ಭವಾಪವರ್ಗಂ ತವ ಯೋಗಿಭಾವಿತಮ್ ।
ಯಥಾಂಽಜಸಾಽಜ್ಞಾನಮಪಾರವಾರಿಧಿಂ
ಸುಖಂ ತರಿಷ್ಯಾಮಿ ತಥಾಽನುಶಾಧಿ ಮಾಮ್ ॥ ೩ ॥

ಹೇ ಪ್ರಭು, ಯೋಗಿಗಳು ಧ್ಯಾನಿಸುವ, ಸಂಸಾರಸಾಗರದಿಂದ ಪಾರು ಮಾಡುವ, ನಿನ್ನ ಪಾದಪದ್ಮಗಳಲ್ಲಿ ಪ್ರಪನ್ನನಾಗುತ್ತೇನೆ; ಅಪಾರವಾದ ಅಜ್ಞಾನವೆಂಬ ಸಮುದ್ರವನ್ನು ಶೀಘ್ರವಾಗಿ ಮತ್ತು ಸುಖವಾಗಿ ದಾಟುವಂತೆ ನನಗೆ ಬೋಧಿಸು.